# ನೂತನ ಸ್ಮೃತಿ: ವಿವೇಕಾನಂದರ ಕಲ್ಪನೆಯಲ್ಲಿ

ಸ್ವಾಮಿ ವೀರೇಶಾನಂದ

**ಆಧುನಿಕ ಯುಗಕ್ಕೆ ಹೊಂದಿಕೆಯಾಗುವ ಒಂದು ಹೊಸ ಸ್ಮೃತಿಯ ರಚನೆಯಾಗಬೇಕು ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿತ್ತು. ಅವರ ಕೃತಿಗಳಲ್ಲಿ ನಾವು ಗುರುತಿಸಬಹುದಾದ ಇದರ ಒಂದು ರೂಪರೇಖೆಯ ಕಿರುಪರಿಚಯವನ್ನು ನೀಡಿರುವ ಸ್ವಾಮಿ ವೀರೇಶಾನಂದರು "ವಿವೇಕ ಪ್ರಭ" ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವರು.**

ಚಕ್ರವರ್ತಿ ರಾಜಗೋಪಾಲಾಚಾರ್ಯರು ಭಾರತನಾಡಿನಲ್ಲಿ ಜನ್ಮತಾಳಿದ ಅತ್ಯಂತ ಮೇಧಾವಿಗಳಲ್ಲಿ ಒಬ್ಬರು. ಅವರು ಸ್ವಾಮಿ ವಿವೇಕಾನಂದರಿಗೆ ಹೀಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ: "ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ಮತ್ತು ಭಾರತವನ್ನು ಕಾಪಾಡಿದರು. ಅವರಿಲ್ಲದೇ ಹೋಗಿದ್ದರೆ, ನಾವು ಧರ್ಮವನ್ನು ಕಳೆದುಕೊಳ್ಳುವುದಷ್ಟೆ ಅಲ್ಲ, ನಮ್ಮ ಸ್ವಾತಂತ್ರ್ಯವನ್ನೂ ಗಳಿಸಿಕೊಳ್ಳುತ್ತಿರಲಿಲ್ಲ. ಆದ್ದರಿಂದ ನಾವು ನಮ್ಮೆಲ್ಲದಕ್ಕೂ ವಿವೇಕಾನಂದರಿಗೆ ಋಣಿಯಾಗಿದ್ದೇವೆ." ಸ್ವಾಮಿ ವಿವೇಕಾನಂದರ ಗರಿಮೆ ಇದರಲ್ಲಿ ಅಡಗಿದೆ. ಜಡ್ಡುಗಟ್ಟಿದ್ದ ಭಾರತದ ಚೇತನವನ್ನು ಅವರು ಪುನರುದ್ಧಾರಗೊಳಿಸಿದರು ; ಸಹಸ್ರವರ್ಷಗಳ ಕಶ್ಮಲದಿಂದ ಕಲುಷಿತಗೊಂಡಿದ್ದ ಹಿಂದೂಧರ್ಮ ಮತ್ತು ಸಮಾಜವನ್ನು ಮತ್ತೆ ಪುನರ್ನಿರ್ಮಾಣ ಮಾಡುವ ಅಪೂರ್ವ ಕಾರ್ಯದ ರೂವಾರಿಗಳಾದರು. ಭರತಖಂಡದ ಭಾಗ್ಯ ವಿವೇಕಾನಂದರ ಉದಯದಿಂದ ಉಳಿಯಿತು, ಬೆಳೆಯಿತು.

ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ಹೇಗೆ ರಕ್ಷಿಸಿದರು? ಅವರು ವೇದಗಳ ಬೆಳಕಿನಲ್ಲಿ ಹಿಂದೂಧರ್ಮದ ಮತ್ತು ಸಮಾಜದ ಪುನರ್ರಚನೆಗೆ ಒತ್ತುಕೊಟ್ಟರು. ಗುಹೆಕಂದರಗಳಲ್ಲಿ ಅಡಗಿದ್ದ, ಕೇವಲ ಕೆಲವು ಅನುಭಾವಿಗಳ, ಮೇಲ್ವರ್ಗದವರ ಸ್ವತ್ತಾಗಿದ್ದ, ಭಾರತದ ಮೂಲಸೆಲೆಯಾದ ಆಧ್ಯಾತ್ಮಿಕತೆಯನ್ನು ಸಾರ್ವತ್ರಿಕವನ್ನಾಗಿ ಮಾಡಿ, ಅನುಷ್ಠಾನಗಮ್ಯವನ್ನಾಗಿ ಮಾಡಿದರು. ಧರ್ಮದ ಮತ್ತು ಆಚಾರಗಳ ವಿಷಯದಲ್ಲಿ ಮುಖ್ಯಾಮುಖ್ಯಗಳ ವಿವೇಚನೆಯನ್ನು ಜನಸಾಮಾನ್ಯರಿಗೆ ಅರಿವುಮಾಡಿಕೊಟ್ಟು, ತುಕ್ಕು ಹಿಡಿದ ತಾಮ್ರವನ್ನು ಮತ್ತೆ ಹೊಳಪಿಗೆ ತರುವಂತೆ, ಸಹಸ್ರವರ್ಷಗಳ ಧಾರ್ಮಿಕ ಮತ್ತು ಸಾಮಾಜಿಕ ಜಾಡ್ಯವನ್ನು ತೆಗೆದು, ಸತ್ಯತತ್ತ್ವವು ಎಲ್ಲರಿಗೂ ಲಭ್ಯವಾಗುವಂತೆ ಮಾಡಿದರು. ಸಂಕ್ಷೇಪವಾಗಿ ಹೇಳುವುದಾದರೆ, ಸ್ವಾಮೀಜಿಯವರು ಆಧುನಿಕ ಸ್ಮೃತಿಕಾರರಾದರು. ನವಯುಗದಲ್ಲಿ ನವಮಾರ್ಗ ತೋರಿದ ನವಯುಗಾಚಾರ್ಯರಾಗಿ ಇತಿಹಾಸದ ಗರ್ಭದಿಂದ ಎದ್ದು ಮಿಂಚಿ ಮರೆಯಾದರು.

## ಶ್ರುತಿ-ಸ್ಮೃತಿ

ಸ್ವಾಮಿ ವಿವೇಕಾನಂದರ ಪ್ರಕಾರ ನಮ್ಮ ಪವಿತ್ರ ಗ್ರಂಥಗಳಲ್ಲಿ ಎರಡು ಬಗೆಯ ಸತ್ಯತತ್ತ್ವಗಳ ಮಧ್ಯೆ ಸ್ಪಷ್ಟವಾದ ಅಂತರವನ್ನು ತೋರಿಸಲಾಗಿದೆ. ಒಂದು ಬಗೆಯವು ಎಂದೆಂದೂ ಚಿರಸ್ಥಾಯಿಯಾಗಿ ಉಳಿಯತಕ್ಕವು. ಮಾನವನ ಸ್ವರೂಪ, ಭಗವತ್ ಸ್ವರೂಪ, ಜೀವಿಯ ಸ್ವರೂಪ, ಜೀವದೊಂದಿಗೆ ಭಗವಂತನ ಸಂಬಂಧ, ಕೈವಲ್ಯಸ್ಥಿತಿ—ಮುಂತಾದ ತತ್ತ್ವಗಳನ್ನು ಪ್ರತಿಪಾದಿಸುವಂಥವು. ಮತ್ತೆ ಕೆಲವು ಸೃಷ್ಟಿಕ್ರಿಯೆ, ಸೃಷ್ಟಿಸ್ಥಿತಿಲಯಗಳ ಅದ್ಭುತ ಚಕ್ರ, ವಿಶ್ವತತ್ತ್ವ, ಸೃಷ್ಟಿಯ ಅನಂತತೆ —ಇವುಗಳ ಬಗ್ಗೆ ತಿಳಿಯಹೇಳುತ್ತವೆ. ಇವುಗಳೆಲ್ಲ ಪ್ರಕೃತಿಯಲ್ಲಿ ಕಂಡುಬರುವ ಸಾರ್ವತ್ರಿಕ ನಿಯಮಗಳ ಬುನಾದಿಯ ಮೇಲೆ ನಿಂತ ನಿತ್ಯತತ್ತ್ವಗಳಾಗಿವೆ. ಇವೇ ಶ್ರುತಿಗಳು. ಎರಡನೆಯ ಬಗೆಯ ಪವಿತ್ರ ಗ್ರಂಥಗಳಿವೆ. ಅವು ಪ್ರತಿದಿನದ ಬಾಳಿಗೆ ಮಾರ್ಗದರ್ಶನವನ್ನೀಯುವ ನಿಯಮಗಳನ್ನು ಒಳಗೊಂಡಿವೆ. ಇವುಗಳಲ್ಲಿ ಪುರಾಣಗಳು ಮತ್ತು ಸ್ಮೃತಿಗಳು ಸೇರಿವೆ. ಸ್ಮೃತಿಗಳಲ್ಲಿನ ಈ ನಿಯಮಾವಳಿಗಳು ಕಾಲಕಾಲಕ್ಕೆ ಪರಿವರ್ತನೆ ಹೊಂದುತ್ತಿರುತ್ತವೆ. ಒಂದು ಯುಗದ ಆಚರಣೆ ಮತ್ತೊಂದು ಯುಗದಲ್ಲಿ ಅಪ್ರಸ್ತುತವಾಗಬಹುದು. ಒಳ್ಳೆಯದು ಕೆಟ್ಟದ್ದಾಗಬಹುದು, ಕೆಟ್ಟದ್ದು ಒಳ್ಳೆಯದು ಎಂದು ಪರಿಗಣಿಸಲ್ಪಡಬಹುದು. ಅವು ಬದಲಾವಣೆ ಹೊಂದಲೇಬೇಕು. ಕಾಲಕಾಲಕ್ಕೆ ಮಹಾನ್ ಋಷಿಗಳು ಅವತಾರವೆತ್ತುವರು. ಹೊಸ ವಾತಾವರಣಕ್ಕೆ ಸರಿಹೊಂದುವಂತಹ ಆಚರಣೆ ಮತ್ತು ಶಿಷ್ಟಾಚಾರಗಳ ಬಗ್ಗೆ ನಮಗೆ ಮಾರ್ಗದರ್ಶನ ಮಾಡುವರು.

ಇನ್ನೊಂದು ವಿಷಯ. ಸ್ಮೃತಿಯು ಶ್ರುತಿಗೆ ಅಧೀನವಾಗಿರಲೇಬೇಕು. ವೇದವಿಹಿತವಲ್ಲದ ಸ್ಮೃತಿಯನ್ನು ಯಾವ ಹಿಂದುವೂ ಒಪ್ಪಲಾರ. ಕೆಲವೊಮ್ಮೆ ಶ್ರುತಿಸ್ಮೃತಿಗಳ ಉಪದೇಶಗಳಲ್ಲಿ ಭಿನ್ನಾಭಿಪ್ರಾಯ ಬಂದರೆ, ಶ್ರುತಿವಿಹಿತವಾದುದನ್ನೇ ಸ್ವೀಕರಿಸಬೇಕು. ಇದೇ ಹಿಂದೂ ಜೀವನಪದ್ಧತಿ, ಸಾವಿರಾರು ವರ್ಷಗಳು ನಡೆದು ಬಂದ ರೀತಿ.

## ನವಸ್ಮೃತಿಯ ಆವಶ್ಯಕತೆ

ಯುಗಗಳು ಉರುಳಿದಂತೆ, ಸ್ಮೃತಿಗಳು ಹುಟ್ಟುವುವು, ನಿಲ್ಲುವುವು, ಅಳಿಯುವುವು. ಅವುಗಳ ಜಾಗದಲ್ಲಿ ನವಸ್ಮೃತಿಗಳು ಮೈದಳೆದು, ನವಯುಗದಲ್ಲಿ ಸಮಾಜಕ್ಕೆ ಮಾರ್ಗದರ್ಶಕಗಳಾಗಿ ನಿಲ್ಲುವವು. ಋಷಿಗಳು ಬರುವರು, ಹೊಸಹೊಸತತ್ತ್ವಗಳನ್ನು ನಮ್ಮ ಮುಂದಿಡುವರು, ಹೋಗುವರು. ಮತ್ತೆ ನವಋಷಿಗಳು ಮೈದೋರುವರು, ನವಸ್ಮೃತಿಗಳನ್ನು ರಚಿಸುವರು. ಹಳೆಯದು ಅಳಿಯುತ್ತದೆ, ಹೊಸದು ಬರುತ್ತದೆ, ಇದೇ ಕಾಲಧರ್ಮ.

ಸ್ವಾಮಿ ವಿವೇಕಾನಂದರು ಈ ನೂತನ ಯುಗಕ್ಕೆ ಅಂತಹ

ದೊಂದು ಸ್ಮೃತಿಯ ರಚನೆಯ ಪ್ರತಿಪಾದಕರಾಗಿದ್ದುದು ಮಾತ್ರವಲ್ಲ, ಅದಕ್ಕೆ ಆವಶ್ಯಕವಾದ ಮಾರ್ಗದರ್ಶಕ ಸೂತ್ರಗಳನ್ನು ಕೂಡಾ ನೀಡಿದ್ದಾರೆ. ಸಮಾಜವನ್ನು ಹೊಸದಿಕ್ಕಿಗೆ ಕೊಂಡೊಯ್ಯುವ ಪ್ರಕ್ರಿಯೆಯಲ್ಲಿ ಒದಗಬಹುದಾದ ಎರಡು ಅಪಾಯಗಳ ಬಗ್ಗೆ ಎಚ್ಚರಿಸಿದ್ದಾರೆ. ಒಂದು, ಹಳೆಯ ಸಾಂಪ್ರದಾಯಿಕತೆಗೆ ಕಟ್ಟುಬಿದ್ದಿರುವುದು ಮತ್ತು ಇನ್ನೊಂದು, ಅದಕ್ಕೆ ತದ್ವಿರುದ್ಧವಾಗಿ ಹೊಸದೆಲ್ಲವನ್ನೂ ಒಳ್ಳೆಯದೆಂದು ನಂಬಿ ಆಚರಿಸುವುದು. ಇವೆರಡೂ ನಮ್ಮ ರಾಷ್ಟ್ರೀಯ ಜೀವನದ ಪ್ರವಾಹವು ಅಖಂಡವಾಗಿ ಹರಿಯುವುದರಲ್ಲಿ ಎದುರಾಗುವ ಅಡ್ಡಿಗಳು. ಪುರಾತನ ಚಿರಂತನ ಮೌಲ್ಯಗಳ ಭವ್ಯ ಬುನಾದಿಯ ಮೇಲೆ, ಆಧುನಿಕ ದೃಷ್ಟಿಕೋನ ಮತ್ತು ಆಚರಣೆಗಳುಳ್ಳ ಮಾದರಿ ಸಮಾಜವೇ ವಿವೇಕಾನಂದರ ಕನಸಾಗಿತ್ತು. ಎಲ್ಲದರಲ್ಲಿಯೂ, ಮುಖ್ಯವಾದುದು ಯಾವುದು, ಅಮುಖ್ಯವಾದುದು ಯಾವುದು ಎನ್ನುವುದನ್ನು ವಿವೇಚಿಸಿ ನೋಡಬೇಕು. ಇಲ್ಲಿ ಚಿರಂತನ ಸತ್ಯಗಳೇ ಮುಖ್ಯವಾದುವು. ಅಮುಖ್ಯವಾದುವು ಕೆಲವುಕಾಲ ಮಾತ್ರ ಪ್ರಾಧಾನ್ಯ ಹೊಂದಿ ನಂತರ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತವೆ. ಅವುಗಳನ್ನು ಹೊಸ ನಿಯಮಗಳಿಂದ ಬದಲಾಯಿಸದಿದ್ದರೆ, ಅವು ನೂತನ ಯುಗದಲ್ಲಿ ಸಮಾಜವನ್ನು ಅಧಃಪತನಕ್ಕೊಯ್ಯಬಹುದು ಎಂದು ಸ್ವಾಮೀಜಿಯವರು ಎಚ್ಚರಿಸುತ್ತಾರೆ.

---

**ನಾವು ಉಪದೇಶಿಸುವುದನ್ನು ಮೊದಲು ನಾವು ಅನುಷ್ಠಾನಕ್ಕೆ ತಂದುಕೊಂಡಿದ್ದಲ್ಲಿ ಖಂಡಿತ ಜನ ನಮ್ಮ ಮಾತುಗಳನ್ನು ಕೇಳಿ ಅದರಂತೆ ಆಚರಿಸುವರು.**

*—ಸ್ವಾಮಿ ವಿವೇಕಾನಂದ*

---

ಅಂತಹ ಒಂದು ನವಸ್ಮೃತಿಯ ರಚನೆಯ ಬಗ್ಗೆ ಸ್ವಾಮಿ ವಿವೇಕಾನಂದರು ತಮ್ಮ ಶಿಷ್ಯ ಶರತ್ ಚಂದ್ರ ಚಕ್ರವರ್ತಿಯೊಡನೆ ನಡೆಸಿದ ಮಾತುಕತೆಗಳಲ್ಲಿ ಪ್ರಸ್ತಾಪಿಸುತ್ತಾರೆ. ಭಾರತದಾದ್ಯಂತ ಏಕರೂಪದ ಸ್ಮೃತಿ ಇಲ್ಲದಿರುವುದರ ಬಗ್ಗೆ ಗಮನ ಸೆಳೆದು, ಈಗ ಸಾಮಾನ್ಯಜನ ವಿವಿಧ ಕಡೆಗಳಲ್ಲಿ ನಡೆಸಿಕೊಂಡು ಹೋಗುತ್ತಿರುವ ಪ್ರಾದೇಶಿಕ ಲೋಕಾಚಾರಗಳು ಹೇಗೆ ವೇದಸಮ್ಮತವಲ್ಲ ಎಂದು ತಿಳಿಯಹೇಳುತ್ತಾರೆ. ಇದನ್ನು ಸರಿಪಡಿಸಲು ವೇದಗಳ ಅಧ್ಯಯನವನ್ನು ಪ್ರೋತ್ಸಾಹಿಸುವುದರ ಮಹತ್ತ್ವವನ್ನು ಒತ್ತಿಹೇಳುತ್ತಾರೆ. ವೇದಗಳಲ್ಲಿನ ವಿಧಿನಿಷೇಧಗಳನ್ನು ಈಗಿನ ಕಾಲದ ಆವಶ್ಯಕತೆಗಳಿಗೆ ಸರಿಹೊಂದುವಂತೆ, ಅಲ್ಪಸ್ವಲ್ಪ ಮಾರ್ಪಾಡುಗಳೊಡನೆ ಕ್ರೋಡೀಕರಿಸಿ, ಅವುಗಳನ್ನು ಸಮಾಜಕ್ಕೆ ಆದರ್ಶಪ್ರಾಯವೆಂದು ಎತ್ತಿ ತೋರಿಸಬೇಕು. ನಾವು ಕೂಡ ಮನು, ಯಾಜ್ಞವಲ್ಕ್ಯರಂತೆ, ಪರಿಶುದ್ಧಾತ್ಮರಾಗಿ, ಅವರಿಗಿಂತಲೂ ಹೆಚ್ಚಿನ ಮಹಾತ್ಮರಾಗಿ, ಈ ಕಾರ್ಯವನ್ನು ಕೈಗೊಂಡರೆ, ಆ ನಿಯಮಗಳು ಸಮಾಜದಲ್ಲಿ ನೆಲೆನಿಲ್ಲುತ್ತವೆ. ನಾವು ಉಪದೇಶಿಸುವುದನ್ನು ಮೊದಲು ನಾವು ಅನುಷ್ಠಾನಕ್ಕೆ ತಂದುಕೊಂಡಿದ್ದಲ್ಲಿ ಖಂಡಿತ ಜನ ನಮ್ಮ ಮಾತುಗಳನ್ನು ಕೇಳಿ ಅದರಂತೆ ಆಚರಿಸುವರು ಎನ್ನುತ್ತಾರೆ ಸ್ವಾಮೀಜಿ. ನಂತರ ಸ್ವಾಮೀಜಿ, ಶರತ್ ಚಂದ್ರನಿಗೆ ಹೇಳುತ್ತಾರೆ : "...ನೀನು ಓದಿದ ಮನುಸ್ಮೃತಿ ಮತ್ತು ಇತರ ಅನೇಕ ಪುಸ್ತಕಗಳ ಆಧಾರ ಮತ್ತು ಅವುಗಳ ಹಿಂದಿನ ಉದ್ದೇಶವೇನು? ಆ ಬುನಾದಿಯನ್ನು ಭದ್ರವಾಗಿರಿಸಿಕೊಂಡು ಪುರಾತನ ಋಷಿಗಳ ಕ್ರಮದಲ್ಲಿ, ಆ ಪವಿತ್ರಗ್ರಂಥಗಳಲ್ಲಿನ ಸಾರಭೂತವಾದ ಸತ್ಯಗಳನ್ನು ಸಂಗ್ರಹಿಸು ಮತ್ತು ಅವುಗಳಿಗೆ ಈ ಕಾಲಕ್ಕೆ ಸರಿಹೊಂದುವಂತಹ ವಿಚಾರಧಾರೆಯನ್ನು ಪೂರಕಗಳಾಗಿ ಹೊಂದಿಸು. ಭಾರತದಾದ್ಯಂತ ಇರುವ ಎಲ್ಲ ಜನಾಂಗಗಳು ಮತ್ತು ಮತಗಳು ಈ ನಿಯಮಗಳನ್ನು ಪಾಲಿಸುವುದರಿಂದ ಪ್ರಯೋಜನ ಪಡೆಯುವಂತೆ ಮಾತ್ರ ನೋಡಿಕೋ. ಈ ಬಗೆಯ ಸ್ಮೃತಿಯೊಂದನ್ನು ರಚಿಸು, ನಾನು ಅದನ್ನು ಪರಿಷ್ಕರಿಸುತ್ತೇನೆ." ಅಂತಹ ಒಂದು ಸ್ಮೃತಿಯನ್ನು ರಚಿಸಿದರೆ ಜನರು ಅದನ್ನು ಸ್ವೀಕರಿಸುತ್ತಾರೆಯೆ ಎಂಬ ಪ್ರಶ್ನೆಗೆ ಸ್ವಾಮೀಜಿ ಗುಡುಗುತ್ತಾರೆ : "...ನೀನು ಸರಿಯಾದ ಪ್ರಕಾರದಲ್ಲಿ ಸ್ಮೃತಿಯೊಂದನ್ನು ರಚಿಸಿದರೆ, ಅದನ್ನು ಜನರು ಒಪ್ಪಿಕೊಳ್ಳುವಂತಹ ಕಾಲವೂ ಬರುವುದು. ನಿನ್ನಲ್ಲಿ ನೀನು ವಿಶ್ವಾಸವಿಡು. ನೀವೆಲ್ಲ ಹಿಂದೆ ವೈದಿಕಋಷಿಗಳಾಗಿದ್ದವರು. ಈಗ ಬೇರೆ ಬೇರೆ ರೂಪಗಳನ್ನು ತಾಳಿದ್ದೀರಿ, ಅಷ್ಟೇ..."

### ವರ್ಣಾಶ್ರಮ ಧರ್ಮ

ಸ್ವಾಮಿ ವಿವೇಕಾನಂದರ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ—ಈ ಎಲ್ಲ ಹೆಸರುಗಳು ಒಂದು ಸಮುದಾಯದಲ್ಲಿನ ಹಲವು ನೆಲೆಗಳಲ್ಲಿರುವ ಜನರ ಗುಂಪುಗಳನ್ನು ಸೂಚಿಸುತ್ತವೆ. ಖಡ್ಗದ ಶಕ್ತಿ ಹೊಂದಿದ ಪಂಗಡ ಕ್ಷತ್ರಿಯರೆನ್ನಿಸಿಕೊಂಡರೆ, ವಿದ್ವತ್ತಿಗೆ ಹೆಸರಾದ ಪಂಗಡವು ಬ್ರಾಹ್ಮಣರೆನ್ನಿಸಿಕೊಳ್ಳುತ್ತದೆ. ಸಂಪತ್ತಿನ ಒಡೆಯರಾದವರು ವೈಶ್ಯರೆಂದು ಕರೆಸಿಕೊಳ್ಳುತ್ತಾರೆ. ಈ ಮುಖ್ಯ ಸಮುದಾಯದವರು ತಮ್ಮ ತಮ್ಮಲ್ಲಿಯೆ ಉಪಪಂಗಡಗಳನ್ನು ಮಾಡಿಕೊಂಡು, ಹೊರಗಿನವರು ಒಳಸಾರದಂತೆ ನೋಡಿಕೊಳ್ಳುವ ಪ್ರಯತ್ನ ಮಾಡಿದರೂ, ಅದು ವಿಫಲವಾಗಿ, ಅವು ಕಾಲಘಟ್ಟದಲ್ಲಿ ಮಿಳಿತವಾಗುತ್ತವೆ. ಇದು ನಮ್ಮ ಕಣ್ಣ ಮುಂದೆಯೆ, ಭಾರತದಲ್ಲಿ ಜರುಗುತ್ತಿರುವುದನ್ನು ಕಾಣುತ್ತೇವೆ.

ವೇದಕಾಲದಲ್ಲಿ ಈ ವರ್ಣಾಶ್ರಮ ಧರ್ಮ, ಮಾನವನೊಬ್ಬನು ತಾನಿರುವ ನೆಲೆಯಿಂದ ನಿಧಾನವಾಗಿ, ಹಂತಹಂತವಾಗಿ ಮೇಲೇರುವುದಕ್ಕೆ ಸಾಧಕವಾಗಬಲ್ಲ ಸಾಮಾಜಿಕ ವ್ಯವಸ್ಥೆಯಾಗಿತ್ತೆ ಹೊರತು, ಹುಟ್ಟಿನ ಮೇಲೆ ಮಾತ್ರ ಆಧಾರವಾದ, ಕಟ್ಟುನಿಟ್ಟಿನ ಪಂಗಡಗಳಾಗಿರಲಿಲ್ಲ. ಸ್ವಾಮೀಜಿಯವರ ಆಶಯವೆಂದರೆ, ಪ್ರತಿಯೊಂದು ವರ್ಣದಲ್ಲಿಯೂ, ಸಾವಿರಾರು ವರ್ಷಗಳಿಂದ ಜೇಡರ ಬಲೆಯಂತೆ, ಅತಿ ಸಂಕೀರ್ಣವಾಗಿ ಬೆಳೆದ ಜಾತಿಗಳೆಲ್ಲ, ನಿಧಾನವಾಗಿ ಕಣ್ಮರೆಯಾಗಿ, ವೇದವಿಹಿತವಾದ ಕೇವಲ ನಾಲ್ಕು ಜಾತಿಗಳು ಮಾತ್ರ ಉಳಿಯಲಾರವೆ ಎಂದು. ಆಧುನಿಕ ಕಾಲದಲ್ಲಿ ಬ್ರಾಹ್ಮಣ ಮೊದಲಾದ

ಅಂಕಿತಗಳು ತಮ್ಮ ಅರ್ಥವನ್ನು ಕಳೆದುಕೊಂಡಿವೆ, ಕಾರಣ ಈಗಿನ ಕಾಲದಲ್ಲಿ ಬ್ರಾಹ್ಮಣ ಎನಿಸಿಕೊಂಡವನು ಚಮ್ಮಾರನ ಕೆಲಸ ಮಾಡುತ್ತಿರುತ್ತಾನೆ ಮತ್ತು ಕೆಳವರ್ಗದ ಜನ ಎನಿಸಿಕೊಂಡವರು ಕೂಡ ಶ್ರೇಷ್ಠ ವಿದ್ವಾಂಸರಾಗಿರುತ್ತಾರೆ. ಹೀಗಿದ್ದಮೇಲೆ, ಈ ಬರಿಯ ಪ್ರತಿಷ್ಠೆ ಏಕೆ ಎಂದು ಪ್ರಶ್ನಿಸುತ್ತಾರೆ ಸ್ವಾಮೀಜಿ. ವೇದಕಾಲೀನ ಮುಕ್ತಸಮಾಜವನ್ನು ಆಧುನಿಕ ಪರಿಸ್ಥಿತಿಗನುಗುಣವಾಗಿ ಪುನರ್ರಚಿಸುವುದೇ ಅವರ ಉದ್ದೇಶವಾಗಿತ್ತು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

### ಜಾತಿಧರ್ಮ - ಸ್ವಧರ್ಮ

ವೇದಗಳು ಪ್ರತಿಯೊಬ್ಬ ಮನುಷ್ಯನ ಉದ್ಧಾರಕ್ಕಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳನ್ನು ಹೇಳುತ್ತವೆ. ಈ ಪುರುಷಾರ್ಥಗಳನ್ನು ಸಿದ್ಧಿಸಿಕೊಳ್ಳಲೆಂದೇ, ವೇದವು ವಿವಿಧ ಜಾತಿ ಪಂಗಡಗಳಿಗೆ ಬೇಕಾದ ಕಟ್ಟುಪಾಡುಗಳ ಧರ್ಮವನ್ನು ಬೋಧಿಸುತ್ತದೆ. ಇದೇ ಜಾತಿಧರ್ಮ. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಸ್ಥಾನಮಾನ ಮತ್ತು ಯೋಗ್ಯತೆಗೆ ಅನುಸಾರವಾಗಿ ವೇದವು ಕರ್ತವ್ಯಗಳನ್ನು ವಿಧಿಸುತ್ತದೆ. ಇದೇ ಸ್ವಧರ್ಮ. ಈಗ ಪ್ರಚಲಿತವಿರುವ ಜಾತಿಧರ್ಮ ಮತ್ತು ಸ್ವಧರ್ಮಗಳು ವೇದಗಳ ಕಾಲದಲ್ಲಿ ಇದ್ದುದಕ್ಕಿಂತ ವಿರುದ್ಧವಾಗಿವೆ ಮತ್ತು ಅವು ಒಳಿತಿಗಿಂತ ಕೆಡುಕನ್ನೆ ನಮ್ಮ ಸಮಾಜಕ್ಕೆ ಉಂಟುಮಾಡಿವೆ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಇದಕ್ಕೆ ಪರಿಹಾರವೆಂದರೆ, ನಮ್ಮ ಜನರಲ್ಲಿ ಶಾಸ್ತ್ರಗಳ ಅರಿವನ್ನು ಹೆಚ್ಚಿಸುವುದು ಮತ್ತು ಅದರ ಮೂಲಕ ನಿಜವಾದ ಜಾತಿಧರ್ಮ ಮತ್ತು ಸ್ವಧರ್ಮಗಳನ್ನು ಪುನಃ ಸ್ಥಾಪಿಸುವುದು. ಹಾಗಾದಾಗ ನಮ್ಮ ದೇಶಕ್ಕೆ ಅದು ನಿಜವಾದ ಮತ್ತು ಖಂಡಿತವಾದ ವರವಾಗಿ ಮಾರ್ಪಡುತ್ತದೆ ಎನ್ನುವುದು ಅವರ ಅಭಿಪ್ರಾಯ.

### ಕೆಳವರ್ಗದವರನ್ನು ಮೇಲೆತ್ತುವುದು

ಸಾವಿರಾರು ವರ್ಷಗಳಿಂದ ನಮ್ಮವರೇ ಆದ ರೈತಾಪಿ ಬಂಧುಗಳು, ನಮಗಾಗಿ ಹಗಲಿರುಳೂ ಬೆವರು ಸುರಿಸಿ, ನಾವು ಭೋಗಿಸುವ ಸಂಪತ್ತನ್ನು ಉತ್ಪಾದಿಸುತ್ತಿದ್ದಾರೆ. ಜಾತಿಯ ಹೆಸರಿನಲ್ಲಿ ಅವರನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ಕಂಡು ದೌರ್ಜನ್ಯ ಮತ್ತು ಶೋಷಣೆಗೆ ಒಳಪಡಿಸುತ್ತಿರುವುದನ್ನು ಕಂಡು ಸ್ವಾಮಿಗಳ ಹೃದಯ, ಆ ಮುಗ್ಧ ಸಾಮಾನ್ಯಜನಕ್ಕಾಗಿ ಮಮ್ಮಲ ಮರುಗುತ್ತದೆ. ಆಹಾ, ಇದಕ್ಕಿಂತಲೂ ಹೆಚ್ಚಿನ ಪಾಪವುಂಟೆ ಎಂದವರು ಉದ್ಗರಿಸುತ್ತಾರೆ. ಜಾತಿಗಳನ್ನು ಒಂದುಮಾಡುವ ಬದಲು ಈ ವೈಷಮ್ಯ ಮತ್ತು ಸವಲತ್ತುಗಳಲ್ಲಿನ ಅನ್ಯಾಯವನ್ನು ಸರಿಪಡಿಸಿ ಎಂದವರು ತಮ್ಮ ನಾಡಿನವರಿಗೆ ಕರೆಕೊಡುತ್ತಾರೆ. ತುಳಿಯಲ್ಪಟ್ಟವರನ್ನು, ಅಶಿಕ್ಷಿತರನ್ನು, ದರಿದ್ರರನ್ನು ಮೇಲೆತ್ತಿ, ಅವರಿಗೆ ಅಶನ, ವಸನ, ಶಿಕ್ಷಣಗಳಲ್ಲಿ ಸಮಾನ ಅವಕಾಶವನ್ನು ಮಾಡಿಕೊಡಿ ಎಂದು ಮೇಲ್ವರ್ಗದವರಿಗೆ ತಿಳಿಯಹೇಳುತ್ತಾರೆ. ಇಲ್ಲದಿದ್ದರೆ, ನಿಮ್ಮ ಗೋರಿಯನ್ನು ನೀವೇ ತೋಡಿಕೊಳ್ಳುವಿರಿ, ಜನಸಾಮಾನ್ಯರು ತಮಗೆಸಗಿದ ದೌರ್ಜನ್ಯಗಳ ವಿರುದ್ಧ ಸಿಡಿದೆದ್ದು ನಿಮ್ಮ ಹಕ್ಕನ್ನು ಕಿತ್ತುಕೊಳ್ಳುವರು ಎಂದು ಭವಿಷ್ಯವಾಣಿ ನುಡಿಯುತ್ತಾರೆ. ಅದು ಎಷ್ಟರಮಟ್ಟಿಗೆ ಸತ್ಯವೆಂದು ಸ್ವಾತಂತ್ರ್ಯೋತ್ತರ ಕಾಲಮಾನದಲ್ಲಿ ಆಗಿರುವ ಸಾಮಾಜಿಕ ಕ್ಷೋಭೆಯಿಂದ ನಾವು ತಿಳಿದುಕೊಳ್ಳಬಹುದು.

ಈ ಸಂದರ್ಭದಲ್ಲಿ ಸಂಸ್ಕೃತ ಶಿಕ್ಷಣವನ್ನು ಸರ್ವಸಾಮಾನ್ಯವನ್ನಾಗಿ ಮಾಡಬೇಕೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಕಾರಣ, ಸಂಸ್ಕೃತ ಘನತೆಯ, ಪ್ರತಿಷ್ಠೆಯ ಪ್ರತೀಕ. ಸಂಸ್ಕೃತ ಜ್ಞಾನವುಳ್ಳ ಬ್ರಾಹ್ಮಣರು ಅದನ್ನು ತಮ್ಮ ಸ್ವತ್ತನ್ನಾಗಿ ಇಟ್ಟುಕೊಂಡು, ಪ್ರತಿಷ್ಠೆಯಿಂದ ಮೆರೆದರು. ಆ ಜ್ಞಾನ ಕೆಳವರ್ಗದವರಿಗೂ ಸಿಕ್ಕಿದರೆ, ಆ ಪ್ರತಿಷ್ಠೆಯ ಹುಂಬಾಟವೆಲ್ಲ ಕಣ್ಮರೆಯಾಗುವುದು, ನಿಮ್ಮ ವರ್ಗದವರೂ ತಲೆಯೆತ್ತಿ ನಿಲ್ಲುವರು ಎನ್ನುವುದು ಸ್ವಾಮೀಜಿಯವರ ಅಭಿಪ್ರಾಯವಾಗಿತ್ತು. ವರ್ಗಸಂಘರ್ಷವನ್ನು ಹೇಗಾದರೂ ಮಾಡಿ ತಪ್ಪಿಸಿರೆಂದೇ ದೇಶಬಾಂಧವರಿಗೆ ಸ್ವಾಮಿ ವಿವೇಕಾನಂದರ ಕಳಕಳಿಯ ಮನವಿಯಾಗಿದೆ. ಸಂಘರ್ಷವಾದಲ್ಲಿ ಸಾಮಾಜಿಕ ವ್ಯವಸ್ಥೆಯ ಕೆಡುಕುಗಳ ಜೊತೆಗೆ ಒಳಿತುಗಳೂ ನಾಶವಾಗುತ್ತವೆ. ಹಳೆಯ ವ್ಯವಸ್ಥೆಯ ರಕ್ಷಣೆ ಇಲ್ಲದೆ, ಹೊಸ ವ್ಯವಸ್ಥೆ ಹುಟ್ಟದೆ ಜನಸಮುದಾಯ ಅತಂತ್ರವಾಗುವುದು. ಪರದಾಸ್ಯಕ್ಕೆ, ಪರಸಂಸ್ಕೃತಿಯ ವ್ಯಾಮೋಹಕ್ಕೆ ಜನ ಸಿಕ್ಕಿ, ನಾಡಿನ ಸಂಸ್ಕೃತಿಗೆ ಆಪತ್ತು ಒದಗುವುದು. ಆದ್ದರಿಂದಲೇ ಸ್ವಾಮೀಜಿಯವರು ಕೆಳವರ್ಗದ ಜನರಿಗೂ ಮನವಿ ಮಾಡುತ್ತಾರೆ, ನಿಮ್ಮನ್ನು ನೀವು ಮೇಲೇರಿಸಿಕೊಳ್ಳಿರಿ, ಸಂಘರ್ಷದ ಹಾದಿಯನ್ನು ತುಳಿಯದಿರಿ ಎಂದು.

> **ಬ್ರಾಹ್ಮಣಯುಗದ ವಿದ್ಯೆ, ಕ್ಷತ್ರಿಯನ ಸಂಸ್ಕೃತಿ, ವೈಶ್ಯನ ಹಂಚುವಿಕೆಯ ಶಕ್ತಿ, ಶೂದ್ರನ ಸಮತ್ವದ ಆದರ್ಶ, ಇವುಗಳೆಲ್ಲವನ್ನೂ ಇಟ್ಟುಕೊಂಡು, ಅವುಗಳ ಕುಂದನ್ನು ತೊರೆದ ಒಂದು ಸ್ಥಿತಿಯನ್ನು ರಚಿಸುವುದಕ್ಕೆ ಸಾಧ್ಯವಾದಲ್ಲಿ ಅದು ಆದರ್ಶ ಸ್ಥಿತಿಯಾಗುವುದು.**
>
> —ಸ್ವಾಮಿ ವಿವೇಕಾನಂದ

### ನೈಜ ಬ್ರಾಹ್ಮಣತ್ವದೆಡೆಗೆ

ನಿಜವಾದ ಬ್ರಾಹ್ಮಣ ಯಾರು? ಸ್ವಾಮಿ ವಿವೇಕಾನಂದರು ಹೇಳುತ್ತಾರೆ : "ನಮ್ಮ ಆದರ್ಶ ತ್ಯಾಗ ಮತ್ತು ಆಧ್ಯಾತ್ಮಿಕ ಸಂಸ್ಕೃತಿ ಸಂಪನ್ನನಾದ ಬ್ರಾಹ್ಮಣ. ಹಾಗೆಂದರೆ ನಾನಾವುದರ ಬಗೆಗೆ ಹೇಳುತ್ತಿದ್ದೇನೆ ಗೊತ್ತೇನು? ನಾನು ಹೇಳುತ್ತಿರುವುದು ಬ್ರಾಹ್ಮಣತ್ವದ ಬಗೆಗೆ. ಎಲ್ಲಿ ಪ್ರಾಪಂಚಿಕತೆಯು ಎಳ್ಳಷ್ಟೂ ಇಲ್ಲವೋ, ಎಲ್ಲಿ ನಿಜವಾದ ಜ್ಞಾನರಾಶಿಯು ಸಮೃದ್ಧವಾಗಿ ಇರುವುದೋ, ಅದರ ಬಗೆಗೆ. ಇದೇ ಹಿಂದೂಜನಾಂಗದ ಆದರ್ಶವಾಗಿದೆ." ಮುಂದುವರೆದು ಸ್ವಾಮೀಜಿಯವರು ಬ್ರಾಹ್ಮಣಜಾತಿ ಮತ್ತು ಬ್ರಾಹ್ಮಣತ್ವದ ಗುಣಗಳು ಪರಸ್ಪರ ಭಿನ್ನವಾದುವು ಎಂದು ಎಚ್ಚರಿಸುತ್ತಾರೆ. ಬ್ರಾಹ್ಮಣನೊಬ್ಬನ ಮಗ ಬ್ರಾಹ್ಮಣನೇ ಆಗಿರ

ಬೇಕಾದ ಆವಶ್ಯಕತೆ ಇಲ್ಲ. ಸತ್ವಗುಣಪ್ರಧಾನ ಈ ಬ್ರಾಹ್ಮಣತ್ವ. ನಮ್ಮ ದೇಶದಲ್ಲಿಂದು ನಿಜವಾದ ಬ್ರಾಹ್ಮಣನಾಗುವ ಅಥವಾ ನಿಜವಾದ ಕ್ಷತ್ರಿಯನಾಗುವ ಗುಣಗಳು ನಶಿಸುತ್ತಿವೆ. ಈ ಗುಣಗಳು ಪ್ರತಿಯೊಬ್ಬ ಮಾನವನಲ್ಲಿಯೂ ಸುಪ್ತವಾಗಿರುತ್ತವೆ. ಆದ್ದರಿಂದ ಸಹಜವಾಗಿಯೆ, ಒಂದು ನಿರ್ದಿಷ್ಟ ಗುಣವನ್ನು ಬೆಳೆಸಿಕೊಂಡು ಒಬ್ಬನು ಒಂದು ಜಾತಿಯಿಂದ ಇನ್ನೊಂದು ಜಾತಿಗೆ ಪರಿವರ್ತನೆ ಹೊಂದುವುದು ಸಾಧ್ಯ. ಇದಕ್ಕೆ ನಮ್ಮ ಧರ್ಮಗ್ರಂಥಗಳಲ್ಲಿ ಅನೇಕ ನಿದರ್ಶನಗಳಿವೆ. ಸ್ವಾಮಿ ವಿವೇಕಾನಂದರು, ನಮ್ಮೆಲ್ಲ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವೆಂದರೆ ಉನ್ನತ ವರ್ಗದವರನ್ನು ಕೆಳಗಿಳಿಸುವುದಲ್ಲ, ಬದಲಾಗಿ ಕೆಳವರ್ಗದವರನ್ನು ಉನ್ನತ ಮಟ್ಟಕ್ಕೆ ಮೇಲಕ್ಕೊಯ್ಯುವುದು ಎಂದು ಅಭಿಪ್ರಾಯಪಡುತ್ತಾರೆ.

ಸಂಪ್ರದಾಯವು ಇದನ್ನು ಒಪ್ಪುವುದೇ? ಈ ಪ್ರಶ್ನೆಗೆ ಸ್ವಾಮಿ ವಿವೇಕಾನಂದರು ಹೀಗೆ ಉತ್ತರಿಸುವರು : "ಇತ್ತೀಚಿನ ಸ್ಮೃತಿಗಳಲ್ಲಿ ಶೂದ್ರರು ಬ್ರಾಹ್ಮಣರ ರೀತಿನೀತಿಗಳನ್ನೂ ಸಂಪ್ರದಾಯಗಳನ್ನೂ ಅನುಸರಿಸಿದರೆ, ಅದನ್ನು ಒಪ್ಪಿ, ಅವರಿಗೆ ಪ್ರೋತ್ಸಾಹ ನೀಡಬೇಕು ಎಂದಿದೆ. ಹೀಗೆಯೇ ಆಗುತ್ತಿರುವುದನ್ನು ನಾವು ಈಗ ಕಾಣುತ್ತಿದ್ದೇವೆ. ವಾಸ್ತವಿಕತೆಯ ದೃಷ್ಟಿಯಿಂದ ನೋಡಿದರೆ, ಎಲ್ಲ ಜಾತಿಗಳೂ ನಿಧಾನ ನಿಧಾನವಾಗಿ ಮೇಲೇರುತ್ತಿರುವುದನ್ನು ನೋಡಬಹುದು. ಭಾರತದಲ್ಲಿ ನಾವು ಜಾತಿಯಿಂದ ಜಾತಿಯೇ ಇಲ್ಲವಾಗುವ ಮಟ್ಟಕ್ಕೆ ಏರಿ ನಿಲ್ಲುತ್ತೇವೆ. ನಮ್ಮ ಮುಂದಿರುವ ಕಾರ್ಯತಂತ್ರವೆಂದರೆ ಎಲ್ಲರನ್ನೂ ಬ್ರಾಹ್ಮಣರನ್ನಾಗಿ ಮಾಡುವುದು, ಕಾರಣ ಬ್ರಾಹ್ಮಣನೇ ಮಾನವತೆಯ ಅಂತಿಮ ಆದರ್ಶವಾಗಿದ್ದಾನೆ. ಯಾರನ್ನೂ ಕೆಳಕ್ಕೆ ಇಳಿಸದೆ ಎಲ್ಲರನ್ನೂ ಮೇಲಕ್ಕೆ ಏರಿಸುವುದೇ ಈ ಯೋಜನೆಯಾಗಿದೆ."

### ನಾನೊಬ್ಬ ಸಮಾಜವಾದಿ !

ಈಗ ಪ್ರಚಲಿತವಿರುವ ಸಮಾಜವಾದ (Communism)ವೇ ಮೊದಲಾದ ಸಮಾನತೆಯನ್ನು ಪ್ರತಿಪಾದಿಸುವ ವಾದಗಳು ಆಧ್ಯಾತ್ಮಿಕ ಬುನಾದಿಯನ್ನು ಹೊಂದಿರಬೇಕು. ವೇದಾಂತ ಮಾತ್ರ ನಿಜವಾದ ಸಮಾನತೆಯನ್ನು ಜನಸಮುದಾಯದಲ್ಲಿ ತರಬಲ್ಲುದು. ವೇದಾಂತಿಯು ಏಕತೆಯೊಂದೇ ಇರುವುದು, ಅನೇಕತೆಯು ಬರಿಯ ತೋರಿಕೆ ಮಾತ್ರ ಎಂದು ಘೋಷಿಸುತ್ತಾನೆ. ಸ್ವಾಮಿ ವಿವೇಕಾನಂದರದು ಆಧ್ಯಾತ್ಮಿಕ ಸಮಾಜವಾದ, ವೇದಾಂತ ಸಮಾಜವಾದ. ಅವರು ಹೇಳುತ್ತಾರೆ: "ನಾನೊಬ್ಬ ಸಮಾಜವಾದಿ. ಅದು ಬಹಳ ಪರಿಪೂರ್ಣವಾದ ವ್ಯವಸ್ಥೆಯೆಂದೇನಲ್ಲ. ಏನೂ ಇಲ್ಲದೇ ಇರುವುದಕ್ಕಿಂತ ಅರ್ಧ ರೊಟ್ಟಿಯಾದರೂ ಮೇಲಲ್ಲವೇ ಅದಕ್ಕೆ." ಸಮಾಜವಾದದ ತಿರುಳಾದ ಆರ್ಥಿಕ ಸಮಾನತೆಯ ಬಗ್ಗೆ ಸ್ವಾಮೀಜಿಯವರು ಹೀಗೆ ಹೇಳುತ್ತಾರೆ : "ಬೇರೆಲ್ಲ ವ್ಯವಸ್ಥೆಗಳನ್ನೂ ಪ್ರಯೋಗಮಾಡಿ ನೋಡಿ, ಅವುಗಳು ಅಪೂರ್ಣ ಎಂದರಿತಾಗಿದೆಯಷ್ಟೆ. ಈಗ ಇದೊಂದನ್ನು, ಬೇರೇನೂ ಇಲ್ಲದಿದ್ದರೂ ಇದು ಹೊಸದು ಎನ್ನುವುದಕ್ಕಾಗಿಯಾದರೂ, ಪ್ರಯೋಗಿಸಿ ನೋಡೋಣ. ಮತ್ತೆ ಮತ್ತೆ ಅದೇ ವರ್ಗಗಳ ಜನಗಳು ನೋವು ನಲಿವುಗಳನ್ನು ಅನುಭವಿಸುವುದಕ್ಕಿಂತ, ಅವುಗಳ ಪುನರ್‌ವಿತರಣೆ ಎಷ್ಟೋ ಒಳ್ಳೆಯದು. ಈ ಸಂಕಟದ ಜಗತ್ತಿನಲ್ಲಿ ಪ್ರತಿಯೊಂದು ನಾಯಿ ಕೂಡ ದಿನದ ಬೆಳಕನ್ನು ಕಾಣಲಿ."

ಸಾಮಾಜಿಕ ನಿಯಮಗಳು ಮಾನವನ ಸ್ವಾತಂತ್ರ್ಯ ವಿಕಸನದಲ್ಲಿ ಅಡ್ಡಿಯಾಗಬಾರದು. ಸಮಾಜದ ಎಲ್ಲ ಸದಸ್ಯರೂ ಸಂಪತ್ತನ್ನು ಗಳಿಸಿಕೊಳ್ಳಲು, ಶಿಕ್ಷಣ ಮತ್ತು ಜ್ಞಾನವನ್ನು ಪಡೆಯಲು, ಮತ್ತಿತರ ಎಲ್ಲ ಸಂಗತಿಗಳಲ್ಲಿಯೂ ಸ್ವಾತಂತ್ರ್ಯವಿರಬೇಕು. ಮಾನವನ ಪರಮಾರ್ಥ ಸಿದ್ಧಿಯಾದ ಮೋಕ್ಷದೆಡೆ ಮುಂದುವರೆಯಲೂ ಎಲ್ಲರಿಗೂ ಸಮಾನ ಅವಕಾಶವಿರಬೇಕು. ಪರಿಪೂರ್ಣ ಸ್ವಾತಂತ್ರ್ಯದ ಗಳಿಕೆಯ ದಾರಿಯಲ್ಲಿ ಅಡ್ಡಿಬರುವ ಎಲ್ಲ ಸಾಮಾಜಿಕ ನಿಯಮಗಳೂ ಹಾನಿಕರವಾದುವು ಎಂದು ತಿಳಿಯಬೇಕು. ಅವುಗಳನ್ನು ಶೀಘ್ರವೇ ನಿವಾರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಯಾವ ಸಾಮಾಜಿಕ ಸಂಸ್ಥೆಗಳ ಮೂಲಕ ಮೋಕ್ಷಮಾರ್ಗದಲ್ಲಿ ಮುಂದುವರೆಯಲು ಸಾಧ್ಯವೋ ಅವುಗಳನ್ನು ಪ್ರೋತ್ಸಾಹಿಸಬೇಕು. ಇವು ಸಮಾಜವಾದದ ಬಗೆಗೆ ಸ್ವಾಮಿ ವಿವೇಕಾನಂದರ ಕೆಲವು ವಿಚಾರಗಳು.

### ಸತ್ಯಯುಗದ ಹರಿಕಾರರಾಗಿ ಶ್ರೀರಾಮಕೃಷ್ಣರು

ಸ್ವಾಮಿ ವಿವೇಕಾನಂದರು ತಮ್ಮ "ಹಿಂದೂಧರ್ಮ ಮತ್ತು ಶ್ರೀರಾಮಕೃಷ್ಣರು" ಎಂಬ ಲೇಖನದಲ್ಲಿ ಶ್ರೀರಾಮಕೃಷ್ಣರು ಸನಾತನ ಧರ್ಮದ ಮೂರ್ತಿವೆತ್ತ ಸ್ವರೂಪ ಎಂದು ಬಣ್ಣಿಸುತ್ತಾರೆ. ಮುಂಬರುವ ಧರ್ಮಸಮನ್ವಯದ ಆ ಅಪೂರ್ವಯುಗದ ಪ್ರವರ್ತಕರು ಶ್ರೀರಾಮಕೃಷ್ಣರು ಎಂದು ಹೃದಯಸ್ಪರ್ಶಿಯಾಗಿ ತಮ್ಮ ಗುರುದೇವರನ್ನು ಕೊಂಡಾಡುತ್ತಾರೆ. ಮತ್ತೊಂದು ಕಡೆ ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರು ಜನ್ಮತಳೆದ ದಿನದಂದೇ ಸತ್ಯಯುಗವು ಆರಂಭವಾಯಿತು. ಇನ್ನು ಮುಂದೆ ಎಲ್ಲ ಭೇದ ಭಾವಗಳೂ ನಶಿಸುವುವು. ಚಂಡಾಲನಿಂದ ಹಿಡಿದು ಎಲ್ಲರೂ ಅವರ ಭಗವತ್‌ಪ್ರೇಮದ ಪಾಲುದಾರರಾಗುವರು. ಗಂಡಸರು ಹೆಂಗಸರ, ಬಡವ ಬಲ್ಲಿದರ, ಅಕ್ಷರಸ್ಥರು ನಿರಕ್ಷರಸ್ಥರ ನಡುವಿನ ಗೋಡೆಗಳನ್ನು ಬೇರುಸಹಿತ ಕಿತ್ತೊಗೆಯಲೆಂದೇ ಶ್ರೀರಾಮಕೃಷ್ಣರು ಬಾಳಿಬದುಕಿದರು. ಅವರು ಶಾಂತಿಯ ಆಲಯವಾಗಿದ್ದಾರೆ. ಹಿಂದೂಗಳು ಮತ್ತು ಮುಸ್ಲಿಮರ, ಹಿಂದೂಗಳು ಮತ್ತು ಕ್ರೈಸ್ತರ ನಡುವಿನ ವೈಷಮ್ಯದ ಘರ್ಷಣೆಯೆಲ್ಲ ಗತಕಾಲದ ಸಂಗತಿಗಳಾಗಲಿವೆ. ಈ ಸತ್ಯಯುಗದಲ್ಲಿ ಶ್ರೀರಾಮಕೃಷ್ಣರ ಪವಿತ್ರಪ್ರೇಮಧಾರೆಯ ಅಲೆಗಳು ಎಲ್ಲರನ್ನೂ ಒಂದುಗೂಡಿಸಿವೆ." ಈ ಬಗೆಯ ಸತ್ಯಯುಗದ ಕಲ್ಪನೆಯಲ್ಲಿ ಮತ್ತು ಅದನ್ನು ಸಾಕಾರಗೊಳಿಸುವಲ್ಲಿ ಮುಂಬರುವ ಜನಾಂಗದ ಸಾಮರ್ಥ್ಯದಲ್ಲಿ ಅಪಾರ ವಿಶ್ವಾಸವಿತ್ತು ಸ್ವಾಮಿ ವಿವೇಕಾನಂದರಿಗೆ : "ಯಾವಾಗ ಒಂದೇ ಜಾತಿ, ಒಂದೇ ವೇದಗಳಿರುತ್ತವೋ, ಶಾಂತಿ ಸೌಹಾರ್ದಗಳು ನೆಲೆನಿಲ್ಲುತ್ತವೋ ಅಂತಹ ಸತ್ಯಯುಗವು ಬರುವುದೆಂದು ನಾನು ನಂಬುತ್ತೇನೆ. ಸತ್ಯಯುಗದ ಈ ಭಾವನೆಯು ಭಾರತದೇಶವನ್ನು ಪುನಃ ಚೇತನಗೊಳಿಸುವುದು. ಇದನ್ನು ನಂಬಿ."